ಭೀಮಾಶಂಕರ ಸಕ್ಕರೆ ಕಾರ್ಖಾನೆಯ ಗೋದಾಮು ಕಟ್ಟಡದ ಕಳಪೆ ಕಾಮಗಾರಿ ಬಗ್ಗೆ ಸಿ.ಓ.ಡಿ ತನಿಖೆ

ಶ್ರೀ ಶಿವಾನಂದ ಪಾಟೀಲ್ (ತಿಕೋಟಾ) : ಮಾನ್ಯ ಅಧ್ಯಕ್ಷರೆ, ಏಳನೇ ತಾರೀಖಿನಂದು ಬಳ್ಳೊಳ್ಳಿ ಮತಕ್ಷೇತ್ರದ ವ್ಯಾಪ್ತಿಗೆ ಬರುವ ಭೀಮಾಶಂಕರ ಸಕ್ಕರೆ ಕಾರ್ಖಾನೆಯ ಗೋದಾಮು ಕಟ್ಟಡ ಆಕಸ್ಮಿಕ ಬಿರುಗಾಳಿಗೆ ಸಿಲುಕಿ ಕುಸಿದು ಬಿದ್ದು ಮೂರು ಜನರು ಸಾವನ್ನಪ್ಪಿದ್ದಾರೆ. ಅಲ್ಲದೆ, ಅಲ್ಲಿ ನಡೆಯತಕ್ಕಂಥ ಕಳಪೆ ಕಾಮಗಾರಿ ಬಗ್ಗೆ ಒಬ್ಬ ಶಾಸಕರು ಅನೇಕ ಬಾರಿ ದೂರುಗಳನ್ನು ಸಲ್ಲಿಸಿದ್ದಾರೆ. ಅಲ್ಲಿ ನಡೆಯುವ ಪ್ರತಿಯೊಂದು ಕಾಮಗಾರಿಯೂ ಕಳಪೆ ಮಟ್ಟದಾಗಿರುವುದರಿಂದ ಅದನ್ನು ಕೂಲಂಕುಷವಾಗಿ ಪರಿಶೀಲಿಸಿ ಯೋಗ್ಯ ನಿರ್ಣಯ ತೆಗೆದುಕೊಳ್ಳಬೇಕೆಂದು ಹೇಳಿದ್ದರು. ಆದುದರಿಂದ, ನನ್ನ ಪ್ರಶ್ನೆಯೇನೆಂದರೆ, ಮೊದಲನೆಯದಾಗಿ ಗೋದಾಮಿನ ಕಟ್ಟಡ ಕುಸಿದು ಬಿದ್ದು ಸಾವಿಗೀಡಾದವರಿಗೆ ಪರಿಹಾರ ನೀಡುವುದು. ಎರಡನೆಯದಾಗಿ, ಭೀಮಾಶಂಕರ ಸಕ್ಕರೆ ಕಾರ್ಖಾನೆಯಲ್ಲಿ ನಡೆಯುವ ಪ್ರತಿಯೊಂದೂ ಕಾಮಗಾರಿಯೂ ಕಳಪೆ ಮಟ್ಟದ್ದಾಗಿದ್ದು, ಸುಮಾರು ಐವತ್ತು ಲಕ್ಷ ರೂಪಾಯಿಗಳ ಗೋದಾಮು ಕಟ್ಟಡದ ಕೆಲಸ ಇನ್ನೂ ಮುಗಿದಿಲ್ಲ, ಮುಗಿಯುವ ಹಂತದಲ್ಲಿದೆ. ಇತ್ತೀಚೆಗೆ ಏಳನೇ ತಾರೀಖಿನ ದಿವಸದಂದು ಆಕಸ್ಮಾತ್ ಬಿರುಗಾಳಿಗೆ ಸಿಲುಕಿ ಗೋದಾಮು ಕಟ್ಟಡ ಕುಸಿದಿದೆಯಲ್ಲದೆ ಜೊತೆಗೆ ಕಟ್ಟಿದ್ದ ಆಶ್ರಯ ಮನೆಗಳೂ ಕೂಡ ಬಿದ್ದಿವೆ. ಇಷ್ಟೊಂದು ಕಳಪೆ ಕಾಮಗಾರಿಗಳು ಆ ಭಾಗದಲ್ಲಿ ನಡೆಯುತ್ತಿರುವುದರ ಬಗ್ಗೆ ಅನೇಕ ಸಲ ಸರ್ಕಾರದ ಗಮನಕ್ಕೆ ತಂದಿದ್ದರೂ ಯಾವುದೇ ಪರಿಹಾರ ಕಂಡುಹಿಡಿದಿಲ್ಲ. ಇದರ ಬಗ್ಗೆ ಸಿ.ಓ.ಡಿ.ತನಿಖೆಯಾಗಬೇಕೆಂದು ಒತ್ತಾಯಿಸುತ್ತೇನೆ.

ಶ್ರೀ ಬಿ. ಸೋಮಶೇಖರ್ (ಕಂದಾಯ ಸಚಿವರು) : ಬಿರುಗಾಳಿ ಬಂದು ಗೋದಾಮು ಕಟ್ಟಡ ಕುಸಿದು ಕೆಲವು ಜನ ಸಾವನ್ನಪ್ಪಿರುವ ಬಗ್ಗೆ ಮಾನ್ಯ ಸದಸ್ಯರು ಏನು ತಿಳಿಸಿದ್ದಾರೆ, ಇದರ ಬಗ್ಗೆ ನಾನು ತಕ್ಷಣವೇ ಅಲ್ಲಿನ ಜಿಲ್ಲಾಧಿಕಾರಿಗಳನ್ನು ಸಂಪರ್ಕಿಸಿ ಆ ಕುರಿತ ವರದಿ ತರಿಸಿಕೊಂಡು ನಮ್ಮ ವ್ಯಾಪ್ತಿಯೊಳಗೆ ಏನು ಸಹಾಯ ಮಾಡಬೇಕೋ ಅದನ್ನು ಮಾಡುತ್ತೇವೆ.

ಶ್ರೀ ಉಮೇಶ್. ವಿ. ಕತ್ತಿ (ಸಕ್ಕರೆ ಸಚಿವರು) : ಮಾನ್ಯ ಸದಸ್ಯರು ಈಗಾಗಲೇ ಹೇಳಿರುವಂತೆ, ಬಿರುಗಾಳಿಗೆ ಸಿಲುಕಿ ಅಲ್ಲಿನ ಗೋದಾಮು ಕಟ್ಟಡ ಕುಸಿದು ಕೆಲವರು ಸಾವೀಗೀಡಾಗಿದ್ದಾರಲ್ಲದೆ, ಇನ್ನೂ 30-40 ಕಟ್ಟಡಗಳೂ ನೆಲಸಮವಾಗಿರುವುದರಿಂದ ಕಳಪೆ ಕಾಮಗಾರಿ ಬಗ್ಗೆ ಕೂಡಲೇ ತನಿಖೆ ನಡೆಸಬೇಕೆಂದು ಈಗಾಗಲೇ ಆದೇಶ ಕೊಟ್ಟಿದ್ದೇವೆ.

ರಾಜ್ಯದಲ್ಲಿ ಇದೇ ತಿಂಗಳು 14 ನೇ ತಾರೀಖಿನಂದು ನಡೆಯುವ ಪಿ.ಜಿ.ಕೋರ್ಸಿನ ಎಂಟ್ರೆನ್ಸ್ ಎಕ್ಸಾಮಿನೇಷನ್ ಅನ್ನು ಒಂದು ವಾರ ಕಾಲ ಮುಂದೂಡುವುದು.

ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ) : ಮಾನ್ಯ ಅಧ್ಯಕ್ಷರೆ, ಕರ್ನಾಟಕ ರಾಜ್ಯ ಮೆಡಿಕಲ್ ಎಜ್ಯುಕೇಷನ್ ಪಿ.ಜಿ.ಕೋರ್ಸ್‌ಗಳಿಗೆ ಸಂಬಂಧಿಸಿದ ಎಂಟ್ರೆನ್ಸ್ ಎಕ್ಸಾಮಿನೇಷನ್ ಬರುವ 14ನೇ